ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೋ&ಫ/2017-18. ದಿನಾಂಕ: 30.04.2018.

**ಜ್ಞಾಪನ**

ವಿಷಯ: ಮಾರ್ಚ್ 2018ರ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳ ಭಾವಚಿತ್ರದಲ್ಲಿರುವ ನ್ಯೂನ್ಯತೆಯ ಬಗ್ಗೆ.

ಉಲ್ಲೇಖ:
1. ಈ ಕಛೇರಿಯ ಸುತ್ತೋಲೆ ಸಂಖ್ಯೆ: PUE/exam/1 PU/Fee-up-dation /2017-18 ದಿನಾಂಕ: 17.10.2017
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಪಪೂಶಿಇ/ಪರೀಕ್ಷೆ/ನೋ&ಫ/2017-18. ದಿನಾಂಕ: 09.02.2018

* * * * *

ಮೇಲ್ಕಂಡ ಸುತ್ತೋಲೆಗಳಲ್ಲಿ 2017-18ನೇ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಮಾಹಿತಿಯನ್ನು (ವಿದ್ಯಾರ್ಥಿಯ ಹೆಸರು, ತಂದೆ ತಾಯಿಯ ಹೆಸರು SSLC ಅಂಕಪಟ್ಟಿಯಲ್ಲಿರುವಂತೆ ವಿದ್ಯಾರ್ಥಿ ತೆಗೆದುಕೊಂಡಿರುವ ಸಂಯೋಜನೆ, ಭಾಷಾ ಹಾಗೂ ವಿಷಯಗಳು, ಮಾಧ್ಯಮ) ಭಾವಚಿತ್ರ ಇತ್ಯಾದಿಗಳನ್ನು ಪ್ರಾಂಶುಪಾಲರೆ ಖುದ್ದಾಗಿ ಪರಿಶೀಲಿಸಿ ನ್ಯೂನ್ಯತೆಗಳಿದ್ದಲ್ಲಿ ಪೂರಕ ದಾಖಲೆಗಳೊಡನೆ ದಿನಾಂಕ 10.11.2017 ಮತ್ತು 28.02.2018 ನಿಗಧಿಗೊಳಿಸಿ ಕೇಂದ್ರ ಕಛೇರಿಯನ್ನು ಸಂಪರ್ಕಿಸಲು ಸೂಚಿಸಲಾಗಿತ್ತು.

ಈಗಲೂ ಸಹ ವಿದ್ಯಾರ್ಥಿಗಳ ಭಾವಚಿತ್ರಗಳಲ್ಲಿ ನ್ಯೂನ್ಯತೆಯಿರುವ ಬಗ್ಗೆ ಇಲಾಖೆಗೆ ದೂರುಗಳು ಬಂದಿರುತ್ತದೆ. ಈ ನ್ಯೂನ್ಯತೆಗಳು ಅಂಕಪಟ್ಟಿಯಲ್ಲಿಯೂ ಸಹ ಮುಂದುವರೆದು ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೆ ಸಮಸ್ಯೆಯನ್ನು ಸೃಷ್ಟಿಸುತ್ತದೆ. ಈ ಹಿನ್ನಲೆಯಲ್ಲಿ ಇಲಾಖೆಯು ನ್ಯೂನ್ಯತೆಗಳನ್ನು ಸರಿಪಡಿಸಲು ಕೊನೆಯ ಅವಕಾಶ ನೀಡುತ್ತಿದ್ದು, ಇಲಾಖಾ Online Portalನ್ನು ದಿನಾಂಕ 02.05.2018 ರಿಂದ 10.05.2018 ರವರೆಗೆ ತೆರೆಯುತ್ತಿದ್ದು, ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ತೇರ್ಗಡೆಯಾದ ಎಲ್ಲಾ ವಿದ್ಯಾರ್ಥಿಗಳ ಭಾವಚಿತ್ರಗಳನ್ನು ಪ್ರಾಂಶುಪಾಲರೆ ಖುದ್ದಾಗಿ ಪರಿಶೀಲಿಸಿ ಸರಿಪಡಿಸಲು ಅವಕಾಶ ನೀಡಿದೆ. ವಿದ್ಯಾರ್ಥಿಗಳ ಮಾಹಿತಿಗಳಲ್ಲಿ ನ್ಯೂನ್ಯತೆಗಳಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ ದಿನಾಂಕ 15.05.2018 ರೊಳಗೆ ಪ್ರಾಂಶುಪಾಲರೇ ಖುದ್ದಾಗಿ ಇಲಾಖೆಯನ್ನು ಸಂಪರ್ಕಿಸಲು ಸೂಚಿಸಿದೆ.

ಭಾವಚಿತ್ರಗಳಲ್ಲಿ ನ್ಯೂನ್ಯತೆಗಳಿದ್ದಲ್ಲಿ ಇತ್ತೀಚಿನ ಭಾವಚಿತ್ರವನ್ನು Scan ಮಾಡಿ Online Portal ನಲ್ಲಿ ಅಳವಡಿಸಲು ಸೂಚಿಸಿದೆ. ಮೇ ತಿಂಗಳ ಅಂತ್ಯದೊಳಗೆ ತೇರ್ಗಡೆಯಾದ ಎಲ್ಲಾ ವಿದ್ಯಾರ್ಥಿಗಳ ಅಂಕಪಟ್ಟಿಗಳನ್ನು ವಿತರಿಸಲು ಕ್ರಮಕೈಗೊಳ್ಳಲಾಗುತ್ತಿದೆ. ನಿಗಧಿತ ದಿನಾಂಕದೊಳಗೆ ನ್ಯೂನ್ಯತೆಗಳನ್ನು ಸರಿಪಡಿಸದಿದ್ದಲ್ಲಿ ಮುಂದಿನ ಎಲ್ಲಾ ಆಗುಹೋಗುಗಳಿಗೆ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರಾಗಿರುತ್ತಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲರುಗಳು ಪರೀಕ್ಷಾ ಶಾಖೆಯ ಅಧೀಕ್ಷಕರುಗಳನ್ನು ಸಂಪರ್ಕಿಸಲು ಸೂಚಿಸಿದೆ.

| ಕ್ರ. ಸಂ. | ಅಧೀಕ್ಷಕರುಗಳ ವಿವರ | ಮೊಬೈಲ್ ಸಂಖ್ಯೆ | ಜಿಲ್ಲೆಗಳು |
|---|---|---|---|
| 1. | ಶ್ರೀ ಗಿರೀಶ್ ಪಿ.ಎಸ್. ಅಧೀಕ್ಷಕರು (ಪರೀಕ್ಷೆ) | 9945907970 | ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ ರಾಮನಗರ, ತುಮಕೂರು, ಕೋಲಾರ, ಮತ್ತು ಚಿಕ್ಕಬಳ್ಳಾಪುರ |
| 2. | ಶ್ರೀ ಸಿಂಜಾಪ್ ಅಧೀಕ್ಷಕರು (ಪರೀಕ್ಷೆ) | 9449327820 | ಮೈಸೂರು, ಚಾಮರಾಜನಗರ, ಕೊಡಗು, ಮಂಗಳೂರು, ಉಡುಪಿ, ಮಂಡ್ಯ ಮತ್ತು ಚಿಕ್ಕಮಗಳೂರು. |

| | | | |
|---|---|---|---|
| 3. | ಶ್ರೀ ಶ್ರೀನಿವಾಸ್ ಅಧೀಕ್ಷಕರು (ಪರೀಕ್ಷೆ) | 9148021058 | ಬೆಳಗಾಂ, ಚಿಕ್ಕೋಡಿ, ಧಾರವಾಡ, ಬಾಗಲಕೋ ಗದಗ್ ಹಾವೇರಿ ಮತ್ತು ಕಾರವಾರ. |
| 4. | ಶ್ರೀಮತಿ ರಾಧಮ್ಮ ಅಧೀಕ್ಷಕರು (ಪರೀಕ್ಷೆ) | 9731058549 | ಕಲ್ಬುರ್ಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ, ಬೀದರ್ ಮತ್ತು ರಾಯಚೂರು. |
| 5. | ಶ್ರೀಮತಿ ಹೇಮಲತ ಅಧೀಕ್ಷಕರು (ಪರೀಕ್ಷೆ) | 9845922564 | ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಹಾಸ ಮತ್ತು ಬಿಜಾಪುರ. |

**<u>ONLINE PORTAL ಬಗ್ಗೆ ವಿಚಾರಣೆಗಾಗಿ :</u>**

1. ಶ್ರೀಮತಿ ಶಶಿಕಲಾ ಮೊಬೈಲ್ ಸಂಖ್ಯೆ : 9480814075
2. ಶ್ರೀಮತಿ ಸುಮಾಯ್ಯ ತಾಜ್ ಮೊಬೈಲ್ ಸಂಖ್ಯೆ : 9731863274
3. ಶ್ರೀ ಬಾಲಾಜಿ ಮೊಬೈಲ್ ಸಂಖ್ಯೆ : 8892562073
4. ಇ–ಆಡಳಿತ ಶಾಖೆ : 080 23083876

**ದಿನಾಂಕ: 10.05.2018ರ ನಂತರ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.**

30/4/18

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರಿಗೆ – ಮಾಹಿತಿಗಾಗಿ ಹಾಗೂ ಒಂದು ಪ್ರತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ. (ವಿದ್ಯಾರ್ಥಿಗಳಿಗೆ ಈ ಕುರಿತು ಸೂಕ್ತ ನಿರ್ದೇಶನ ನೀಡಲು)
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ.
4. ಗಣಕ ಶಾಖೆಗೆ.
5. ಇಲಾಖಾ ಇ–ಆಡಳಿತ ಶಾಖೆ, (ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲು).